**ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ**
**KARNATAKA LEGISLATIVE ASSEMBLY, RESEARCH AND REFERENCE BRANCH**

**ಪತ್ರಿಕಾ ತುಣುಕುಗಳು**
**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: ವಿಧಾನ ಪರಿಷತ್

ಪತ್ರಿಕೆಯ ಹೆಸರು : NAME OF THE NEWS PAPER: ದಿನಾಂಕ : DATE: 19/12/20

# ಮೇಲ್ಮನೆ ಗದ್ದಲಕ್ಕೆ ವಿಶ್ರಾಂತ ಕುಲಪತಿಗಳ ಖಂಡನೆ

19/12/20

ಬೆಂಗಳೂರು: ವಿಧಾನ ಪರಿಷತ್‌ನಲ್ಲಿ ಇತ್ತೀಚೆಗೆ ನಡೆದ ಗಲಾಟೆ ರಾಜ್ಯ ರಾಜಕೀಯ ಚರಿತ್ರೆಗೆ ಧಕ್ಕೆ ಉಂಟು ಮಾಡಿದ್ದು, ಕಳೆದ ಹತ್ತು ವರ್ಷದಲ್ಲಿ ರಾಜ್ಯ ರಾಜಕಾರಣಕ್ಕೆ ಬಂದವರಲ್ಲಿ ಸಂವಿಧಾನ, ಕಾನೂನು, ಸಂಸದೀಯ ನಡವಳಿ, ಸಾರ್ವಜನಿಕ ಸಂಕೋಚ, ಕನಿಷ್ಠ ಪ್ರಾಮಾಣಿಕತೆ ಕಾಣಿಸುತ್ತಿಲ್ಲ ಎಂದು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ವಿಶ್ರಾಂತ ಕುಲಪತಿಗಳ ವೇದಿಕೆ ವಿಷಾದಿಸಿದೆ.

ಘನತೆ, ಗೌರವದ ಸ್ಥಳವಾದ ಪರಿಷತ್‌ನಲ್ಲಿ ಚರ್ಚೆ, ಸಂವಾದ, ವಾಗ್ವಾದಗಳು ನಡೆಯದೇ ರಾಜಕಾರಣಿಗಳು ತೋಳು ಏರಿಸಿ, ತೊಡೆ ತಟ್ಟುವ, ಕುರ್ಚಿ ಕಿತ್ತೆಸೆದು ಸಮರ ಸಾರುವ ಸಂಸ್ಕೃತಿ ಬೆಳೆದಿದ್ದು, ತಲೆ ತಗ್ಗಿಸುವಂತಾಗಿದೆ. ನಾಡಿನ ಮತದಾರರು ಇದನ್ನು ತೀವ್ರವಾಗಿ ಖಂಡಿಸಬೇಕು. ಗಲಾಟೆಯಲ್ಲಿದ್ದ ನಾಯಕರೆಲ್ಲರೂ ಕೊರೋನಾ ನಿಯಮ ಕೂಡ ಉಲ್ಲಂಘಿಸಿದ್ದಾರೆ ಎಂದು ವೇದಿಕೆ ಕಾರ್ಯದರ್ಶಿ ಪ್ರೊ.ಆರ್.ಶ್ರೀನಿವಾಸ್ ಗೌಡ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.